ಡಿ.ಡಬ್ಲೂಃ 1

ದಿನಾಂಕಃ **26.06.2024** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು:- ವಾದಿ ಪರವಾಗಿ Sri. MIL, ವಕೀಲರಿಂದ

1. ಸರ್ವೇ ನಂ.71/2, 71/4 ಆಸ್ತಿಗಳನ್ನು ಮಾರಾಟ ಮಾಡುವ ಸಂದರ್ಭದಲ್ಲಿ ನಾನು ಮತ್ತು ನನ್ನ ಉಳಿದ ಸಹೋದರರು ಮತ್ತು ಸಹೋದರಿಯರು ಸಮ್ಮತಿದಾರರು ಎಂದು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ, ನಾನು ಮತ್ತು ನನ್ನ ಉಳಿದ ಸಹೋದರರು ಮತ್ತು ಸಹೋದರಿಯರು ಸಮ್ಮತಿದಾರರು ಎಂದು ದಾಖಲೆಗೆ ಸಹಿ ಮಾಡಿರುವ ಕಾರಣ ಸದರಿ ದಾಖಲೆಯು ಊರ್ಜಿತವಾಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅವರು ಅವರ ಭಾಗವನ್ನು ಮಾರಾಟ ಮಾಡುವುದಾಗಿ ಹೇಳಿದ ಕಾರಣ ಸಹಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

2. ಸರ್ವೇ ನಂ.71/2, 71/4 ನನ್ನ ಮತ್ತು ಉಳಿದ ಕುಟುಂಬದ ಸದಸ್ಯರ ನಡುವೆ ವಿಭಾಗವಾಗಿದೆ ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ. ವಾದಿ ಹಾಗೂ ನನ್ನ ತಂದೆ ತಿಪ್ಪಣ್ಣನ ಸಂಬಂಧ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು ವಾದಿಯ ಮೇಲಿನ ಕೋಪದಿಂದ ದಾವಾ ಆಸ್ತಿ ಸಂಖ್ಯೆ 1 ಬಿ, 1 ಸಿ ಮತ್ತು 1 ಇ ಆಸ್ತಿಗಳನ್ನು ಪ್ರತಿವಾದಿ ನಂ.8 ಮತ್ತು 9 ರವರ ಹೆಸರಿನಲ್ಲಿ ದಾನಪತ್ರವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿ ಸಂಖ್ಯೆ 1 ಬಿ, 1 ಸಿ ಮತ್ತು 1 ಇ ಆಸ್ತಿಗಳು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿ ಸಂಖ್ಯೆ 1 ಬಿ, 1 ಸಿ ಮತ್ತು 1 ಇ ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳು ಇದ್ದು ದಾನ ಪತ್ರ ಮಾಡಲು ಯಾವುದೆ ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿಯು ಆ ವಿಚಾರ ನನಗೆ ಗೋತ್ತಿಲ್ಲ ಎಂದು ನುಡಿಯುತ್ತಾರೆ. ಭೀಮಲ್ಯಾ ದ್ಯಾಮಲಪ್ಪ ಲಮಾಣಿ ನನ್ನ ಅಜ್ಜ ಎಂದರೆ ಸರಿ. ದಾವಾ ಆಸ್ತಿ ಸಂಖ್ಯೆ 1 ಎ ಮೊದಲಿಗೆ ನನ್ನ ತಾತನ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೋತ್ತಿಲ್ಲ. ದಾವಾ ಆಸ್ತಿ ಸಂಖ್ಯೆ 1 ಎ ಯನ್ನು ನನ್ನ ತಂದೆ ಮತ್ತು ಅವರ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆ. ದಾವಾ ಆಸ್ತಿ ಸಂಖ್ಯೆ 1 ಎ ನ್ನು ನನ್ನ ತಂದೆ ನನ್ನ ಹೆಸರಿಗೆ ಹಕ್ಕು ಬಿಡುಗಡೆ ಪತ್ರ ಮಾಡಿ ನನಗೆ ಹಕ್ಕು ಬಿಟ್ಟು ಕೊಟ್ಟಿರುತ್ತಾರೆ.

ನನ್ನ ಪ್ರತಿವಾದ ಪತ್ರದಲ್ಲಿ ದಾವಾ ಆಸ್ತಿ ಸಂಖ್ಯೆ 1 ಎ ಇದು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದು ನಮೂದಿಸಿರುವುದು ಸುಳ್ಳು ಎಂದರೆ ಸರಿಯಲ್ಲ.



4. ಕುಟುಂಬ ವಿಭಾಗದಂತೆ ಸರ್ವೇ ನಂ.26/2 ಮಾತ್ರ ನನ್ನ ಹಿಸ್ಸೆಗೆ ಬಂದಿರುತ್ತದೆ ಎಂದು ನಮೂದಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ 1 ಎ ಪಿತ್ರಾರ್ಜಿತ ಆಸ್ತಿ ಇದ್ದು, ನನ್ನ ಹೆಸರಿನಲ್ಲಿ ನನ್ನ ತಂದೆಗೆ ಹಕ್ಕು ಬಿಡುಗಡೆ ಪತ್ರ ಬರೆಯುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಕಡೆಯಿಂದ ಮೋಸದಿಂದ ಹಕ್ಕು ಬಿಡುಗಡೆ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಿಭಾಗ ಆಗಿದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಕಾರಣ ಸದರಿ ದಾಖಲೆಗಳು ನನ್ನ ತಂದೆಯ ಕಡೆ ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ತೆಗೆಸುವ ಪ್ರಯತ್ನ ನಾನು ಪಟ್ಟಿರುವುದಿಲ್ಲ. ಸದರಿ ದಾಖಲೆಗಳನ್ನು ತೆಗೆದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಈವರೆಗೂ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ.

5. ವಿಭಾಗದಂತೆ ವಾದಿಗೆ ಬಂಗಾರ ಮತ್ತು ಹಣ ನೀಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಐಶರ್ ಕಂಪನಿಯ ಟ್ರ್ಯಾಕ್ಟರ ಇದೆ ಎಂದರೆ ಸರಿ. ಸದರಿ ಟ್ರ್ಯಾಕ್ಟರನ್ನು ನನ್ನ ತಂದೆಯು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಟ್ರ್ಯಾಕ್ಟರನ ಸಾಲ ತಿರುವಳಿ ಮಾಡಲು ಟ್ರ್ಯಾಕ್ಟರನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿ ನನ್ನ ತಮ್ಮ. ದಿಃ 02.06.2009 ರಂದು ನನ್ನ ತಂದೆ 10 ನೇ ಪ್ರತಿವಾದಿಯನ್ನು ನನ್ನ ಚಿಕ್ಕಪ್ಪನಾದ ಶಿವಪ್ಪ ಲಮಾಣಿ ಇವರಿಗೆ ದತ್ತಕ ನೀಡಿರುತ್ತಾರೆ ಎಂದರೆ ಸರಿ. ಸದರಿ ದತ್ತಕ ಪತ್ರಕ್ಕೆ ನಾನು ಸಾಕ್ಷಿ ಅಂತಾ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ವಿಭಾಗ ಆಗದೆ ಇರುವ ಕಾರಣ ವಾದಿಗೆ 1/6 ರಷ್ಟು ಭಾಗ ಇದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

<u>(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)</u>

ಓದಿ.ಹೇ.ಕೇ. ಸರಿ ಅದೆ.

O.S.57-20

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಲಕ್ಮೇಶ್ವರ